ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 141 | Pages. 2 | Date: 06-04-2025, SUNDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 141 - ಪುಟಗಳು : 2 - 06 ಏಪ್ರಿಲ್ 2025 ಭಾನುವಾರ Ph: 8762954248 ದರ : ₹1

ಜಿಲ್ಲಾದ್ಯಂತ ಬಾಬು ಜಗಜೀವನ್ ರಾಮ್ ಸ್ಮರಣೆ

ಉಪಪ್ರಧಾನಿಯ ಸಾಧನೆ ಅರಿಯಿರಿ: ಸಂಸದ ಶ್ರೇಯಸ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಹಸಿರು ಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನ್ ರಾಮ್ ಅವರ ಸಾಧನೆ, ಚಿಂತನೆ ನಮಗೆಲ್ಲರಿಗೂ ದಾರಿದೀಪ. ಭವಿಷ್ಯದ ಪೀಳಿಗೆಗೆ ಮಹನೀಯರ ಕಾರ್ಯಗಳ ಅರಿವು ಮೂಡಿಸಬೇಕು ಎಂದು ಸಂಸದ ಶ್ರೇಯಸ್ ಪಟೇಲ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ, ನಗರಸಭೆ ವತಿಯಿಂದ ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಶನಿವಾರ ಏರ್ಪಡಿಸಿದ್ದ ಡಾ. ಬಾಬು ಜಗಜೀವನ್ ರಾಮ್ ಅವರ 118ನೇ ಜನ್ಮದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ರೈಲ್ವೆ ಸಚಿವರಾಗಿ ಜಗಜೀವನ್ ರಾಮ್ ದೇಶಕ್ಕೆ ನೀಡಿರುವ ಕೊಡುಗೆ ಅಪಾರ. ಇಂದಿಗೂ ರೈಲ್ವೆ ನಿರ್ಮಾಣಗಳಲ್ಲಿ ಅವರ ಹೆಸರು ಅಜರಾಮರವಾಗಿದೆ. ದೇಶಕ್ಕಾಗಿ ದುಡಿದ ಹಿರಿಯರನ್ನು ಎಲ್ಲರೂ ಗೌರವಿಸಬೇಕು ಹಾಗೂ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗಬೇಕು ಎಂದರು.

ಜಿಲ್ಲೆಯಲ್ಲಿ ಡಾ. ಬಾಬು ಜಗಜೀವನ್ ರಾಮ್ ಅವರ ಸಮುದಾಯ ಭವನ ನಿರ್ಮಾಣ ಸಂಬಂಧ ಸಮಾಜ ಕಲ್ಯಾಣ ಇಲಾಖೆ ಸಚಿವರೊಂದಿಗೆ ಚರ್ಚಿಸಿ ಕಾಮಗಾರಿ ಆರಂಭಿಸಲಾಗುವುದು ಎಂದು ಭರವಸೆ ನೀಡಿದರು.

ಜಿಲ್ಲಾಧಿಕಾರಿ ಸಿ. ಸತ್ಯಭಾಮ ಮಾತನಾಡಿ, ಬಿಹಾರ ರಾಜ್ಯದ ಚಂದ್ವಾ ಗ್ರಾಮದಲ್ಲಿ 1908ರಲ್ಲಿ ಜನಿಸಿದ ಬಾಬು ಜಗಜೀವನ್ ರಾಮ್ ಅವರು ದಮನಿತರ

ಹಕ್ಕುಗಳಿಗೆ ಹೋರಾಟ ಮಾಡಿದರು. ನಾವು ಅಂಧಕಾರದಲ್ಲಿದ್ದಾಗ ನಮ್ಮನ್ನು ಬೆಳಗಿದ ಶ್ರೇಷ್ಠ ಧ್ರುವತಾರೆ ಅವರಾಗಿದ್ದಾರೆ. ಉಪ ಪ್ರಧಾನಿ, ಕಾರ್ಮಿಕ ಸಚಿವರಾಗಿ ಅವರು ನೀಡಿರುವ ಕೊಡುಗೆ ಅಪಾರ ಎಂದರು.

ಕುಗ್ರಾಮದಿಂದ ಬಂದು ಅತ್ಯುನ್ನತ ಸ್ಥಾನ ತಲುಪಿದ ಮಹಾನ್ ವ್ಯಕ್ತಿ ನಮಗೆ ಆದರ್ಶವಾಗಿದ್ದಾರೆ. ಅವರ ಹಾದಿಯಲ್ಲಿ ನಾವೆಲ್ಲರೂ ನಡೆಯಬೇಕು. ಅವರ ಹೋರಾಟಗಳ ಪ್ರತಿಫಲ ಎಂಬಂತೆ ಶಿಕ್ಷಣ ಸೇರಿ ಅನೇಕ ಸವಲತ್ತುಗಳು ನಮಗೆ ದೊರೆಯುತ್ತಿವೆ. ಅವುಗಳೆಲ್ಲವುಗಳ ಸದುಪಯೋಗ ಪಡೆಯಬೇಕು ಎಂದರು.

ಮೆರವಣಿಗೆಗೆ ಚಾಲನೆ

ಡಾ. ಬಾಬು ಜಗಜೀವನ್ ರಾಮ್ ಅವರ ಜನ್ಮ ದಿನಾಚರಣೆ ಅಂಗವಾಗಿ ಜಿಲ್ಲಾಧಿಕಾರಿ ಕಚೇರಿ ಆವರಣದಿಂದ ಹಮ್ಮಿಕೊಂಡಿದ್ದ ಮೆರವಣಿಗೆಗೆ ಜಿಲ್ಲಾಧಿಕಾರಿ ಸಿ. ಸತ್ಯಭಾಮ ಚಾಲನೆ ನೀಡಿದರು. ಬಾಬು ಜಗಜೀವನ್ ರಾಮ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಹಾಸನ ಸೇರಿದಂತೆ ಜಿಲ್ಲೆಯ ವಿವಿಧೆಡೆ ಬಾಬು ಜಗಜೀವನ್ ರಾಮ್ ಅವರ ಜನ್ಮ ದಿನ ಆಚರಿಸಲಾಯಿತು. ದಲಿತ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳು ಹಾಗೂ ಸಾಧಕರಿಗೆ ಸನ್ಮಾನಿಸಲಾಯಿತು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ಮಾತನಾಡಿ, ಸಣ್ಣ ಹಳ್ಳಿಯಲ್ಲಿ ಹುಟ್ಟಿ ರಾಷ್ಟ್ರದ ಅತ್ಯುನ್ನತ ಪದವಿಯನ್ನು ಅಲಂಕರಿಸಿದ ಮಹಾನ್ ವ್ಯಕ್ತಿ ಡಾ. ಬಾಬು ಜಗಜೀವನ್ ರಾಮ್. ರಕ್ಷಣೆ, ಆಹಾರ ಹಾಗು ಕೃಷಿ ಇಲಾಖೆಗಳಲ್ಲಿ ಕೆಲಸ ಮಾಡಿದ ಅವರು ದೇಶದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. 1967ರಲ್ಲಿ ದೇಶದಲ್ಲಿ ಜನಸಂಖ್ಯೆ ಹೆಚ್ಚಾಗಿ ಆಹಾರ ಉತ್ಪಾದನೆಯ ಪ್ರಮಾಣ ಕಡಿಮೆಯಾಗಿದ್ದ ಸಂದರ್ಭದಲ್ಲಿ ಆಹಾರ ಉತ್ಪಾದನೆಯ ಪ್ರಮಾಣವನ್ನು ಹೆಚ್ಚಿಸಿ ಹಸಿರು ಕ್ರಾಂತಿಯನ್ನು ಮಾಡಿ ಬಡವರ ಹೊಟ್ಟೆಯನ್ನು ತುಂಬಿಸಿದಂತಹ ಮಹಾನ್ ಪುರುಷರು ಇವರಾಗಿದ್ದಾರೆ. 1977ರಲ್ಲಿ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಕಾರ್ಯ ನಿರ್ವಹಿಸಿದ್ದಾರೆ ಎಂದರು.

ಚರ್ಮ ರೋಗ ತಜ್ಞ ಡಾ. ಕುಮಾರ್ ಭೂತಯ್ಯ ಮಾತನಾಡಿ, ರಾಷ್ಟ್ರ ಪ್ರಗತಿ ಪಥದಲ್ಲಿ ಸಾಗಲು ಡಾ. ಬಾಬು ಜಗಜೀವನ್ ರಾಮ್ ಅವರು ಬಹುಪಾಲು ಕೊಡುಗೆ ನೀಡಿದ್ದಾರೆ. ಕಾರ್ಮಿಕ ಸಚಿವರಾಗಿ ಜಾರಿಗೆ ತಂದಂತಹ ಕಾರ್ಮಿಕ ನೀತಿಗಳು, ರೈಲ್ವೆ ನಿಯಮ, ರಕ್ಷಣಾ ಸಚಿವರಾಗಿದ್ದಾಗ ಜಾರಿಗೆ ತಂದ ನಿಯಮ, ಕೃಷಿ ಕ್ರಾಂತಿ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ಇವರ ಸಾಧನೆಯು ಅಪಾರವಾಗಿದೆ ಎಂದರು.

ಜಾತಿಯನ್ನು ಹೋಗಲಾಡಿಸುವಲ್ಲಿಯೂ ಕೂಡ ಬಹಳಷ್ಟು ಶ್ರಮಿಸಿದ್ದಾರೆ. ಮೌನವಾಗಿ ಕೆಲಸ ಮಾಡಿ ಒಂದು ವ್ಯವಸ್ಥೆಯೊಳಗೆ ಹೇಗೆ ಬದಲಾವಣೆ ಮಾಡಬಹುದು ಎಂಬುದರ ಕುರಿತು ನಮಗೆ ಮಾದರಿಯಾಗಿದ್ದಾರೆ ಎಂದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ. ಕೃಷ್ಣೇಗೌಡ, ನಗರಸಭೆ ಅಧ್ಯಕ್ಷ ಎಂ. ಚಂದ್ರೇಗೌಡ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಪಿ. ದೂದ್‌ಫೀರ್, ಸಮುದಾಯದ ಮುಖಂಡರಾದ ಶಂಕರ್‌ರಾಜ್, ಸಂದೇಶ್, ವಿಜಯ ಕುಮಾರ್, ಸತೀಶ್ ಇತರರಿದ್ದರು.

ಅರಸೀಕೆರೆ: ಚಾಕುವಿನಿಂದ ಇರಿದು ವ್ಯಕ್ತಿ ಕೊಲೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ಚೌಕಬಾರಾ (ಕಟ್ಟಮನೆ) ಆಡುತ್ತಿದ್ದ ವೇಳೆ ಸಣ್ಣ ಕಾರಣಕ್ಕೆ ಶುರುವಾದ ಜಗಳ ವಿಕೋಪಕ್ಕೆ ತಿರುಗಿ ಜಗಳ ಬಿಡಿಸಲು ಹೋದ ವ್ಯಕ್ತಿಗೆ ಚಾಕುವಿನಿಂದ ಇರಿದು ಕೊಲೆ ಮಾಡಿರುವ ಘಟನೆ ತಾಲ್ಲೂಕಿನ ದೋಣನಕಟ್ಟೆ ಗ್ರಾಮದಲ್ಲಿ ಶುಕ್ರವಾರ ರಾತ್ರಿ ನಡೆದಿದೆ. ಲಕ್ಕಪ್ಪ(42), ಕೊಲೆಯಾದ ವ್ಯಕ್ತಿ. ಬಸವರಾಜ ಎಂಬಾತ ಚಾಕುವಿನಿಂದ ಇರಿದು ಕೊಲೆಗೈದು ಪರಾರಿಯಾಗಿದ್ದಾನೆ.

ರಾತ್ರಿ 9 ಗಂಟೆ ಸುಮಾರಿಗೆ ಸೆಕೆ ಇದ್ದುದರಿಂದ ಸಮಯ ಕಳೆಯಲು ಗ್ರಾಮದ ವಸಂತಕುಮಾರ, ಶಶಿಧರ, ನಾಗಮ್ಮ, ಅವರ ಮಕ್ಕಳಾದ ನರಸಿಂಹ, ರಂಗನಾಥ ಗ್ರಾಮದ ಬೋಡಜ್ಜ ಬಸಣ್ಣ ಅವರ ಮನೆಯ ಮುಂಭಾಗದಲ್ಲಿ ಚೌಕಾಬಾರ ಆಡುತ್ತಿದ್ದರು.

ಅಲ್ಲಿಗೆ ಬಂದ ಅದೇ ಗ್ರಾಮದ ಬಸವರಾಜ ಎಂಬಾತ, ನೀವು ಜೂಜಾಟ ಆಡುತ್ತಿದ್ದೀರಾ ಎಂದು 112ಗೆ ಫೋನ್ ಮಾಡುತ್ತೇನೆಂದು ಹೇಳಿ ಹೋಗಿದ್ದಾನೆ. ನಂತರ ಐದಾರು ಮಂದಿ ಚೌಕಾಬಾರ ನಿಲ್ಲಿಸಿ ಅಲ್ಲಿಯೇ ಮಾತನಾಡುತ್ತ ಕುಳಿತಿದ್ದಾಗ ಸಮಯ ರಾತ್ರಿ 11:45 ಗಂಟೆಯಾಗಿತ್ತು.

ನಂತರ ಎಲ್ಲರೂ ಒಟ್ಟಾಗಿ 112ಗೆ ಫೋನ್ ಮಾಡುತ್ತೇನೆ ಎಂದು ಸುಳ್ಳು ಮಾಹಿತಿ ನೀಡಿ ನಿಮ್ಮ ಮೇಲೆ ಕೇಸು ಹಾಕಿಸುವುದಾಗಿ ಹೋಗಿದ್ದ ಬಸವರಾಜನ ಮನೆಯ ಬಳಿ ಹೋಗಿ ನೀನು ಏಕೆ ಈ ರೀತಿ ಮಾಡುತ್ತಿದ್ದೀಯಾ, ಪೊಲೀಸರಿಗೆ ನಮ್ಮ ಮೇಲೆ ಏಕೆ ಸುಳ್ಳು ದೂರು ನೀಡುತ್ತೀಯಾ ಎಂದು ಪ್ರಶ್ನೆ ಮಾಡಿದ್ದಾರೆ.

ಇಷ್ಟಕ್ಕೇ ಬಸವರಾಜ ಮತ್ತು ನಂಜುಂಡ ಇಬ್ಬರೂ ಗುಂಪಿನ ಮೇಲೆ ಏಕಾಏಕಿ ಗಲಾಟೆಗೆ ಬಂದು ಬಸವರಾಜು ಮತ್ತು ನಂಜುಂಡ ಸೇರಿ ಲಕ್ಕಪ್ಪನಿಗೆ ಕೈಗಳಿಂದ ಹೊಡೆದು, ನಂಜುಂಡ, ಏಕಾಏಕಿ ಬಸವರಾಜ ಅವರ ಮನೆಯೊಳಗೆ ಹೋಗಿ ಹರಿತವಾದ ಚಾಕು ತಂದು ಲಕ್ಕಪ್ಪನ ಎಡಪಕ್ಕೆಗೆ ಚುಚ್ಚಿದ್ದಾನೆ. ನಂತರ ಬಸವರಾಜು ಸಹ ನಂಜುಂಡನ ಕೈನಲ್ಲಿದ್ದ ಚಾಕು ಕಿತ್ತುಕೊಂಡು ಲಕ್ಕಪ್ಪನ ಎದೆಯ ಭಾಗಕ್ಕೆ ಮತ್ತೊಮ್ಮೆ ಚುಚ್ಚಿದ್ದರಿಂದ ಲಕ್ಕಪ್ಪ ಅಲ್ಲಿಯೇ ಕುಸಿದು ಬಿದ್ದು, ಮೃತಪಟ್ಟಿದ್ದಾರೆ.

ಈ ವೇಳೆ ಜಗಳ ಬಿಡಿಸಲು ಬಂದ ಶಶಿಧರ ಎಂಬುವರ ಬೆನ್ನಿಗೆ ಹಾಗೂ ವಸಂತಕುಮಾರ ಅವರ ಎಡಗೈಗೆ ಚುಚ್ಚಿದ್ದಾರೆ. ಗಂಡನನ್ನು ಕೊಲೆ ಮಾಡಿದ ಬಗ್ಗೆ ಕೇಳಲು ಹೋಗಿದ್ದಕ್ಕೆ ಮೃತನ ಪತ್ನಿಗೂ ಕೊಲೆ ಬೆದರಿಕೆ ಹಾಕಿದ್ದಾರೆ. ಉಳಿದ ಇಬ್ಬರು ಗಾಯಾಳುಗಳನ್ನು ಪಂಚನಹಳ್ಳಿ ಆಸ್ಪತ್ರೆಗೆ ದಾಖಲಿಸಲಾಗಿದೆ. 5 ವರ್ಷಗಳ ಹಿಂದೆ ಕೆಲಸದಿಂದ ತೆಗೆದುಹಾಕಿದರೆಂಬ ಹಳೆಯ ದ್ವೇಷದಿಂದ ಬಸವರಾಜು ಮತ್ತು ನಂಜುಂಡ ಎಂಬುವರು ಸೇರಿ ಲಕ್ಕಪ್ಪ ಎಂಬುವರನ್ನು ಕೊಲೆ ಮಾಡಿದ್ದಾರೆ ಎನ್ನಲಾಗಿದೆ. ಬಾಣಾವರ ಪೊಲೀಸರು ಪ್ರಕರಣ ದಾಖಲಿಸಿ ಇಬ್ಬರು ಆರೋಪಿಗಳ ಪತ್ತೆಗಾಗಿ ಬಲೆ ಬೀಸಿದ್ದಾರೆ.

ಪಡಿತರದಾರರಿಂದ ಹಣ ಪಡೆಯದಂತೆ ಎಚ್ಚರಿಕೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಪಟ್ಟಣದ ಜೆ.ಪಿ. ನಗರದ ನ್ಯಾಯಬೆಲೆ (ಸಂಖ್ಯೆ 84) ಅಂಗಡಿಯಲ್ಲಿ ಸಾರ್ವಜನಿಕರಿಂದ ಹಣ ಪಡೆಯುತ್ತಿದ್ದಾರೆ ಎಂಬ ದೂರು ಕೇಳಿಬಂದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಭೇಟಿ ನೀಡಿದ ಆಹಾರ ಇಲಾಖೆ ಅಧಿಕಾರಿಗಳು ಅಂಗಡಿ ಮಾಲೀಕರಿಗೆ ಎಚ್ಚರಿಕೆ ನೀಡಿದರು.

ಪ್ರತಿ ತಿಂಗಳು ಪಡಿತರ ಪಡೆಯಲು 20 ರೂಪಾಯಿ ಮತ್ತು ಕೆವೈಸಿ ಹೆಬ್ಬೆಟ್ಟು ನೀಡಲು 30 ರೂ. ಪಡೆಯುತ್ತಿದ್ದಾರೆ ಎಂಬ ಸ್ಥಳೀಯರು ಮಾಹಿತಿ ನೀಡಿದ್ದರು. ವಿಷಯ ತಿಳಿದ ಮಾನವ ಹಕ್ಕುಗಳ ಹೋರಾಟಗಾರರ ಒಕ್ಕೂಟದ ಪದಾಧಿಕಾರಿಗಳು ಆಹಾರ ಇಲಾಖೆ ಅಧಿಕಾರಿಗಳಾದ ವೀಣಾ ಮತ್ತು

ಗೀತಾಂಜಲಿ ಅವರನ್ನು ಕರೆಸಿದರು.

ರೇಷನ್‌ಗೆ ಯಾವುದೇ ಹಣ ಕೊಡುವಂತಿಲ್ಲ. ಸಾರ್ವಜನಿಕರಿಂದ ಮನಬಂದಂತೆ ಹಣ ವಸೂಲಿ ಮಾಡುವುದು ತಪ್ಪು. ಅಕ್ರಮವಾಗಿ ಹಣ ಪಡೆದಿರುವ ಸೊಸೈಟಿ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ಭರವಸೆ ನೀಡಿದರು.

ಮಾನವ ಹಕ್ಕು ಹೋರಾಟ ಒಕ್ಕೂಟದ ಜಿಲ್ಲಾಧ್ಯಕ್ಷ ಎಂ.ಜಿ. ನಿಂಗರಾಜ್ ಮಾತನಾಡಿ, ಜೆ.ಪಿ. ನಗರ ಬಡಾವಣೆಯ ಸೊಸೈಟಿಯಲ್ಲಿ ಮನಬಂದಂತೆ ಹಣ ಪಡೆಯುತ್ತಿದ್ದಾರೆ. ಬಡವರ ಅನುಕೂಲಕ್ಕಾಗಿ ಜಾರಿಗೊಳಿಸಿರುವ ಯೋಜನೆ ಈ ರೀತಿ ಹಳ್ಳ ಹಿಡಿಯುತ್ತಿರುವುದು ಖಂಡನೀಯ. ಜೆ.ಪಿ. ನಗರ ಬಡಾವಣೆಯ ಸೊಸೈಟಿ ನಿರ್ವಾಹಕಿ ಪದ್ಮಮ್ಮ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು. ಇಲ್ಲವಾದರೆ ತಾಲ್ಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಮಾನವ ಹಕ್ಕು ಹೋರಾಟ ಒಕ್ಕೂಟದ ತಾಲ್ಲೂಕು ಅಧ್ಯಕ್ಷ ಐ.ಎನ್. ಅರುಣ್ ಕುಮಾರ್, ಪ್ರಧಾನ ಕಾರ್ಯದರ್ಶಿ ಜೆ.ಎನ್. ಲಕ್ಷ್ಮಿನಾರಾಯಣ, ಬಿ.ಪಿ. ಶಂಕರ್ ಪ್ರಸಾದ್, ಕಿರಣ್, ಆರ್. ದೀಕ್ಷಿತ್, ರವೀಂದ್ರನಾಥ್ ಇತರರಿದ್ದರು.

ಶ್ರೀ ಶಿವಕುಮಾರ ಸ್ವಾಮೀಜಿ ಜನ್ಮ ದಿನಾಚರಣೆ

ಹಾಸನ: ತ್ರಿವಿಧ ದಾಸೋಹಿ ಲಿಂಗೈಕ್ಯ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಲಕ್ಷಾಂತರ ಮಕ್ಕಳಿಗೆ ವಿದ್ಯಾದಾನ ಮಾಡುವ ಮೂಲಕ ತಮ್ಮದೇಯಾದ ಕೊಡುಗೆ ನೀಡಿದ್ದಾರೆ ಎಂದು ಶಾಸಕ ಹೆಚ್.ಪಿ. ಸ್ವರೂಪ್ ಹೇಳಿದರು.

ನಗರದ ಬಸವೇಶ್ವರ ಕಲ್ಯಾಣ ಮಂಟಪ ರಸ್ತೆಯಲ್ಲಿ ಜಟಾಯು ಯುವಕರ ಬಳಗದಿಂದ ಶನಿವಾರ ಏರ್ಪಡಿಸಿದ್ದ ಶ್ರೀ ಶಿವಕುಮಾರ ಸ್ವಾಮೀಜಿ ಅವರ 118ನೇ ಜನ್ಮ ದಿನಾಚರಣೆಯಲ್ಲಿ ಮಾತನಾಡಿ, ಶ್ರೀ ಶಿವಕುಮಾರ ಸ್ವಾಮೀಜಿ ಬಡ ವಿದ್ಯಾರ್ಥಿಗಳಿಗೆ ಊಟ, ವಸತಿ,

ಉಚಿತ ಶಿಕ್ಷಣ ನೀಡಿರುವುದು ಮಾತ್ರವಲ್ಲದೆ ಸದೃಢ ಸಮಾಜಕ್ಕೆ ಮುನ್ನುಡಿ ಬರೆದಿದ್ದಾರೆ ಎಂದರು. ಶ್ರೀಗಳು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ಸಾಗಬೇಕು. ಅವರ ನಡೆ ನುಡಿ ಸಾಧನೆಯ ಹಾದಿ ನಮಗೆಲ್ಲ ದಾರಿದೀಪ. ಅಂತಹ ಮಹನೀಯರನ್ನು ಸ್ಮರಿಸುವುದು ಯುವಕರ ಕರ್ತವ್ಯ. ಶಿವಕುಮಾರ ಸ್ವಾಮೀಜಿ ಅವರು ಅಜರಾಮರ ಎಂದರು. ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ರಘು, ವೀರಶೈವ ಲಿಂಗಾಯತ ಮಹಾಸಭಾ ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್ ಇತರರಿದ್ದರು.

ಭಾವಣೆ ಕುಸಿತ: ಪ್ರಾಣಾಪಾಯದಿಂದ ಪಾರು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಶನಿವಾರ ಸಂಜೆ ಸುರಿದ ಧಾರಾಕಾರ ಮಳೆಗೆ ತಾಲ್ಲೂಕಿನ ಹಾನುಬಾಳ್ ಗ್ರಾಮದಲ್ಲಿ ವಾಣಿಜ್ಯ ಮಳಿಗೆಯ ಛಾವಣಿ ಕುಸಿದು ಬೈಕ್‌ಗಳು ಹಾನಿಗೀಡಾಗಿವೆ.

ಸಂಜೆ 6 ಗಂಟೆಯಿಂದ ಬಿರುಗಾಳಿ ಸಹಿತ ಜೋರು ಮಳೆ ಶುರುವಾಯಿತು. ಗ್ರಾಮದ ವೃತ್ತದಲ್ಲಿನ ಮಳಿಗೆಯೊಂದರ ಛಾವಣಿ ಏಕಾಏಕಿ ಕುಸಿದ ಪರಿಣಾಮ ಮಳೆಯಿಂದ ಆಶ್ರಯ ಪಡೆಯಲು ನಿಂತಿದ್ದ ಜನರು ದಿಕ್ಕಾಪಾಲಾಗಿ ಓಡಿದರು. ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾದರು. ಮಳೆ ಬಂದ ಕಾರಣ ಬೇಕರಿ, ಪ್ರಾವಿಜನ್ ಸ್ಟೋರ್, ಹಾರ್ಡ್‌ವೇರ್ ಅಂಗಡಿಗಳ ಕೆಳಗೆ ಸಾರ್ವಜನಿಕರು ನಿಂತಿದ್ದರು. ಘಟನೆಯಲ್ಲಿ ಬೈಕ್‌ಗಳು ಹಾನಿಗೀಡಾಗಿವೆ.

ಕಳೆದ ಮೂರ್ನಾಲ್ಕು ದಿನಗಳಿಂದ ಅಬ್ಬರಿಸುತ್ತಿರುವ ಮಳೆ ಶನಿವಾರ ಸಂಜೆಯು

ಸುರಿಯಿತು. ಹಾಸನದಲ್ಲಿ ಸಂಜೆ 7 ಗಂಟೆ ಬಳಿಕ ತುಂತುರು ಮಳೆಯಿಂದ ಇಳೆ ತಂಪಾಯಿತು. ಹೊಳೆನರಸೀಪುರ, ಅರಕಲಗೂಡು, ಚನ್ನರಾಯಪಟ್ಟಣದಲ್ಲೂ ಸಾಧಾರಣ ಮಳೆಯಾಗಿದೆ.

ಪತ್ರಕರ್ತರ ಮನದಾಳದ ಮಾತು ದಾಖಲು

ಅಮೃತ ಬೀಜ ಪುಸ್ತಕ ಬಿಡುಗಡೆ 39 ಹಿರಿಯ ಪತ್ರಕರ್ತರ ಜೀವನಗಾಥೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಸಂಪಾದಿಸಿರುವ ರಾಜ್ಯದ 39 ಪತ್ರಕರ್ತರ ಅಂತರಾಳವನ್ನು ಒಳಗೊಂಡಿರುವ ಅಮೃತ ಬೀಜ ಪುಸ್ತಕವನ್ನು ಜಿಲ್ಲಾ ಪತ್ರಕರ್ತರ ಸಂಘದಲ್ಲಿ ಶನಿವಾರ ಬಿಡುಗಡೆ ಮಾಡಲಾಯಿತು.

ಈ ವೇಳೆ ಮಾತನಾಡಿದ ಶಿವಾನಂದ ತಗಡೂರು ಅವರು, 75ನೇ ಸ್ವಾತಂತ್ರ್ಯ ಸಂದರ್ಭದಲ್ಲಿ ಹಿರಿಯ ಪತ್ರಕರ್ತರ ಮನೆಗಳಿಗೆ ಭೇಟಿ ನೀಡಿ ಅವರನ್ನು ಒಂದೆಡೆ ಸೇರಿಸಲು ಯೋಜನೆ ಹಾಕಿಕೊಳ್ಳಲಾಗಿತ್ತು. ಆದರೆ ಅವರ ಅನಾರೋಗ್ಯ ಮತ್ತಿತರ ಕಾರಣಗಳಿಂದ ಅದನ್ನು ಬದಲಿಸಿ ಹಿರಿಯ ಪತ್ರಕರ್ತರ ಮನೆಯಂಗಳಕ್ಕೆ ಪತ್ರಕರ್ತರ ಸಂಘ ಎಂಬ ಯೋಜನೆ ಹಾಕಿಕೊಳ್ಳಲಾಯಿತು ಎಂದು ಹೇಳಿದರು.

ಹಿರಿಯರ ಮನೆ ಅಂಗಳಕ್ಕೇ ಕೆಯುಡಬ್ಲ್ಯೂಜೆ ಹೆಜ್ಜೆ ಹಾಕಲು ನಿರ್ಧರಿಸಿ, ಮೊದಲಿಗೆ ಕಲ್ಲೇಶ್‌ಗೌಡ ಅವರ ಮನೆಗೆ ಭೇಟಿ ನೀಡಿದೆವು. ನಂತರ

ಟಿ.ಡಿ.ಎಸ್. ಜಾರ್ಜ್, ಪಿ.ರಾಮಯ್ಯ, ಸುಶೀಲಾ ಸುಬ್ರಹ್ಮಣ್ಯ, ನಾಗಮಣಿ, ವೆಂಕಟೇಶ್ ಭಟ್, ಪಿ.ಆರ್.ಕೃಷ್ಣರಾವ್, ಆರ್.ಜಯಕುಮಾರ್ ಸೇರಿದಂತೆ ಅನೇಕ ಪತ್ರಕರ್ತರ ಮನೆಗೆ ತೆರಳಿ ಅವರ ಅನುಭವವನ್ನು ಈ ಪುಸ್ತಕದಲ್ಲಿ ಹಂಚಿಕೊಳ್ಳಲಾಗಿದೆ, ಇದರಲ್ಲಿ ನಮ್ಮ ಜಿಲ್ಲೆಯ ಪತ್ರಕರ್ತರೂ ಸೇರಿದ್ದಾರೆ ಎಂದು ತಿಳಿಸಿದರು.

ಗ್ರಂಥಾಲಯದಲ್ಲಿ ಪತ್ರಿಕೋದ್ಯಮಕ್ಕೆ ಸಂಬಂಧಿಸಿದ ಪುಸ್ತಕಗಳು ಬಹಳ ಕಡಿಮೆ. ಈ ಪುಸ್ತಕದಲ್ಲಿ ದಾಖಲು ಮಾಡಿರುವುದೂ ಕಡಿಮೆ. ಆದರೆ ಮುಂದಿನ ಪೀಳಿಗೆಗೆ ಹಿಂದಿನ ತಲೆಮಾರಿನವರು ಮಾಡಿರುವ ಸಾಧನೆ ತಿಳಿಸಿಕೊಡುವ ಪ್ರಯತ್ನವನ್ನು ಈ ಮೂಲಕ ಮಾಡಲಾಗಿದೆ. ಈ ಪುಸ್ತಕವನ್ನು ಇನ್ನೂ ವಿಸ್ತಾರವಾಗಿ ಬರೆಯಬಹುದಿತ್ತು ಎಂಬ ಅಭಿಪ್ರಾಯ ವ್ಯಕ್ತವಾಯಿತು. ಆದರೆ ಫೇಸ್‌ಬುಕ್, ವಾಟ್ಸ್‌ಆಪ್ ಯುಗದಲ್ಲಿ ಸಂಕ್ಷಿಪ್ತವಾಗಿ ಕಟ್ಟಿಕೊಡಲಾಗಿದೆ ಎಂದರು.

ಹಿರಿಯ ಪತ್ರಕರ್ತ ಕೆ.ಆರ್. ಮಂಜುನಾಥ್ ಮಾತನಾಡಿ, ಅಮೃತ ಬೀಜ ಪುಸ್ತಕದಲ್ಲಿ ಪತ್ರ

ಲೋಕಾಯುಕ್ತಕ್ಕೆ ಜಿಲ್ಲೆಯ 83 ಅರ್ಜಿ ಸಲ್ಲಿಕೆ

ಶೀಘ್ರ ವಿಲೇವಾರಿಗೆ ಉಪ ಲೋಕಾಯುಕ್ತರ ಸೂಚನೆ

ಮೇ 15 ರಿಂದ ಪ್ರವಾಸ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲೆಯ ಸಾರ್ವಜನಿಕರಿಂದ 83 ಅರ್ಜಿಗಳು ಲೋಕಾಯುಕ್ತ ಕಚೇರಿಗೆ ಸಲ್ಲಿಕೆಯಾಗಿದ್ದು ಸಂಬಂಧಪಟ್ಟ ಅಧಿಕಾರಿಗಳು ಅವುಗಳ ವಿಲೇವಾರಿಗೆ ಕ್ರಮ ಕೈಗೊಳ್ಳಬೇಕು ಎಂದು ಉಪ ಲೋಕಾಯುಕ್ತ ನ್ಯಾ. ಕೆ.ಎನ್. ಫಣೀಂದ್ರ ಹೇಳಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಶುಕ್ರವಾರ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಮಾತನಾಡಿದ ಅವರು, ಮೇ 15 ರಿಂದ 17ರ ವರೆಗೆ ಜಿಲ್ಲಾ ಪ್ರವಾಸ ಕೈಗೊಳ್ಳಲಾಗಿದೆ. ಮೇ 15ರ ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮ ಪ್ರಾರಂಭವಾಗಲಿದೆ. ಅಧಿಕಾರಿಗಳಿಗೆ ಲೋಕಾಯುಕ್ತದಡಿಯಲ್ಲಿ ಬರುವ ಅರ್ಜಿಗಳ ಕುರಿತು ಸೂಕ್ಷ್ಮವಾಗಿ ಮಾಹಿತಿ ನೀಡುವುದರ ಜೊತೆಗೆ ಸೂಕ್ತ ಕಾನೂನು ಸಲಹೆ ನೀಡಲಾಗುವುದು ಎಂದು ತಿಳಿಸಿದರು.

ದೂರುದಾರರಿಂದ ಅರ್ಜಿ ಸ್ವೀಕರಿಸಲಾಗುವುದು, ಬಂದಂತಹ ಅರ್ಜಿಗಳನ್ನು ಪ್ರತ್ಯೇಕಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಕಾನೂನು ಸೇವಾ ಪ್ರಾಧಿಕಾರದ ಮೂಲಕ ಕಳುಹಿಸಲಾಗುವುದು. ಯಾವ ರೀತಿಯ ದೂರುಗಳನ್ನು ಲೋಕಾಯುಕ್ತಕ್ಕೆ ನೀಡಬಹುದು, ಹಕ್ಕು ಬಾಧ್ಯತೆಗಳೇನು ಎಂಬುದರ ಬಗ್ಗೆ ವಿವರಣೆ ನೀಡಲಾಗುವುದು

ಎಂದು ಹೇಳಿದರು. ದುರುದ್ದೇಶಪೂರಿತ ದೂರುಗಳು ಬಂದಾಗ ಅಧಿಕಾರಿಗಳ ರಕ್ಷಣೆ ಬಗ್ಗೆ ಸಂವಾದ ನಡೆಸಲಾಗುವುದು ಎಂದು ಹೇಳಿದರು.

ಮೇ.16 ರಂದು ಬಾಕಿ ಇರುವ ಪ್ರಕರಣಗಳ ವ್ಯಕ್ತಿಗತ ಸಮಸ್ಯೆಗಳು, ಕೆರೆ ಒತ್ತುವರಿ, ರಸ್ತೆ ಒತ್ತುವರಿ, ಸರ್ಕಾರಿ ಆಸ್ತಿ ಲೂಟಿ, ಸಾರ್ವಜನಿಕ ಸಮಸ್ಯೆಗಳನ್ನು ಸ್ಥಳದಲ್ಲೇ ಇತ್ಯರ್ಥ ಪಡಿಸಲಾಗುವುದು. ತಾಂತ್ರಿಕ ವರದಿ, ಪೊಲೀಸ್ ತನಿಖಾ ವರದಿಗಳನ್ನು ಪಡೆದು ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗುತ್ತದೆ ಈ ನಿಟ್ಟಿನಲ್ಲಿ ದೂರುದಾರರನ್ನು ಆಹ್ವಾನಿಸಲಾಗುವುದು ಎಂದು ತಿಳಿಸಿದರು.

ಮೇ 17 ರಂದು ಬೆ. 10 ರಿಂದ 11 ಗಂಟೆಯವರೆಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಬಗ್ಗೆ ವಕೀಲರಿಗೆ ಕಾನೂನು ಅರಿವು ಕಾರ್ಯಕ್ರಮ, ತಾಲ್ಲೂಕುಗಳ ಭೇಟಿ, ಆಸ್ಪತ್ರೆ, ಹಾಸ್ಟೆಲ್‌ಗಳಿಗೆ ಅನಿರೀಕ್ಷಿತ ಭೇಟಿ ನೀಡಲಾಗುವುದು, ಈ ಪ್ರವಾಸದ ಸಂದರ್ಭದಲ್ಲಿ ಸಾರ್ವಜನಿಕರಿಗೆ ಉತ್ತಮ ಆಡಳಿತ ಸೇವೆ ನೀಡಲು ಮನಸ್ಫೂರ್ತಿಯಾಗಿ ಎಲ್ಲರೂ ಸಹಕಾರ ನೀಡುವಂತೆ ತಿಳಿಸಿದರು.

ವಿಡಿಯೋ ಸಂವಾದದ ನಂತರ ಜಿಲ್ಲಾಧಿಕಾರಿ ಸಿ. ಸತ್ಯಭಾಮ ಮಾತನಾಡಿ, ಲೋಕಾಯುಕ್ತದಿಂದ ಬರುವಂತಹ 83 ಅರ್ಜಿಗಳಿಗೂ ಸಂಬಂಧಪಟ್ಟ ಅಧಿಕಾರಿಗಳು ಇಂದಿನಿಂದಲೇ ಕಾರ್ಯಪ್ರವೃತ್ತರಾಗಿ, ಜವಾಬ್ದಾರಿಯಿಂದ ಕಾನೂನು ವ್ಯಾಪ್ತಿಯಲ್ಲಿ ವಿಲೇವಾರಿಗೆ ಸೂಕ್ತ ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಬಿ.ಆರ್. ಪೂರ್ಣಿಮಾ ಮಾತನಾಡಿ, ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಬರುವ ಅರ್ಜಿಗಳನ್ನು ಶೀಘ್ರ ವಿಲೇವಾರಿಗೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ, ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಬಿ.ಎನ್. ನಂದಿನಿ ಇತರರಿದ್ದರು.

ಹಿರೀಸಾವೆಯಲ್ಲಿ ಚೌಡೇಶ್ವರಿ ಹಬ್ಬಕ್ಕೆ ಚಾಲನೆ

ಚನ್ನರಾಯಪಟ್ಟಣ: ತಾಲ್ಲೂಕಿನ ಹಿರೀಸಾವೆ ಗ್ರಾಮದಲ್ಲಿ ಶ್ರೀ ಹೆಬ್ಬಾರಮ್ಮ ದೇವಸ್ಥಾನಕ್ಕೆ ಭಕ್ತರು ಪೂಜೆ ಸಲ್ಲಿಸಿ ಬಾಗಿಲು ತೆರೆಯುವ ಮೂಲಕ ಗ್ರಾಮದೇವತೆ ಶ್ರೀ ಚೌಡೇಶ್ವರಿ ದೇವಿಯ ಹಬ್ಬಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.

ಮಾ. 4 ರಿಂದ 15 ದಿನಗಳ ಕಾಲ ಹಬ್ಬವನ್ನು ಹಿರೀಸಾವೆ ಮತ್ತು ಹೊನ್ನೇನಹಳ್ಳಿ ಗ್ರಾಮದಲ್ಲಿ ಸಾಂಪ್ರದಾಯಿಕವಾಗಿ ಸಂಭ್ರಮ ಸಡಗರದಿಂದ ಆಚರಿಸಲಾಗುತ್ತದೆ. ಮುಂದಿನ ಮಂಗಳವಾರ ರಾತ್ರಿ ಉಯ್ಯಾಲೆ ಕಂಬಕ್ಕೆ ಬಾಳೆ ಕಂದನ್ನು ಕಟ್ಟುವ ಮೂಲಕ ಹಬ್ಬದ ಧಾರ್ಮಿಕ ವಿಧಾನಗಳನ್ನು ಎರಡು ಗ್ರಾಮದಲ್ಲಿ ಅನುಸರಿಸುತ್ತಾರೆ.

ಪ್ರತಿ ರಾತ್ರಿ ಸಮಯದಲ್ಲಿ ದೇವಿಯ ಮೆರವಣಿಗೆ ಮತ್ತು ಜನಪದ ಶೈಲಿಯ ರಂಗವನ್ನು ಕುಣಿಯಲಾಗುವುದು. ಚೌಡೇಶ್ವರಿ ದೇವರಿಗೆ ಕಂಕಣ ಕಟ್ಟಿದ ನಂತರ ದೇವಿಯ ಮನೆತನದವರು ತಮ್ಮ ಮನೆಗಳಲ್ಲಿ ಮದುವೆ ಮತ್ತಿತರ ಶುಭ ಸಮಾರಂಭಗಳನ್ನು ಮಾಡುವುದಿಲ್ಲ.

ಸಂಬಳಕ್ಕಿಂತ ಕೌಶಲಕ್ಕೆ ಆದ್ಯತೆ ನೀಡಿ: ಜೀವನ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಶಿಕ್ಷಣ ಮುಗಿದ ಮೇಲೆ ಕೆಲಸಕ್ಕೆ ಹೋಗುವಾಗ ಆರಂಭದಲ್ಲೇ ಸಂಬಳಕ್ಕಾಗಿ ಆಸೆಪಡದೆ ಮೊದಲು ಕೆಲಸ ಕಲಿತು ಕೌಶಲ ವೃದ್ಧಿಸಿಕೊಂಡರೆ ಮುಂದೆ ನಿರೀಕ್ಷಿಸಿದ ಮಟ್ಟದಲ್ಲಿ ಸಂಬಳ ಪಡೆಯಬಹುದು ಎಂದು ಎಸ್ಪಿರಿಕ್ಯೂಟೆಕ್ ನಿರ್ದೇಶಕ ಜೀವನ್ ತಿಳಿಸಿದರು.

ನಗರದ ಸರ್ಕಾರಿ ಗೃಹ ವಿಜ್ಞಾನ ಕಾಲೇಜು ಸಭಾಂಗಣದಲ್ಲಿ ಕ್ಯಾರಿಯರ್ ಆ್ಯಂಡ್ ಪ್ಲೇಸ್ಮೆಂಟ್ ಸೆಲ್, ಇಂಟರನಲ್ ಕ್ವಾಲಿಟಿ ಆ್ಯಂಡ್ ಅಸುರೆನ್ಸ್ ಸೆಲ್ ಸಂಯುಕ್ತಾಶ್ರಯದಲ್ಲಿ ಗುರುವಾರ ಹಮ್ಮಿಕೊಳ್ಳಲಾಗಿದ್ದ ಪ್ಲೇಸ್ ಮೆಂಟ್ ಡ್ರೈವ್ ಅಂತಿಮ ಮತ್ತು ಅಲ್ಯುಮಿನಿ ಸ್ಟೂಡೆಂಟ್ಸ್‌ಗೆ ವೃತ್ತಿ ಮತ್ತು ಸಮಾಲೋಚನೆ ಉದ್ಯೋಗ ನಿಯೋಜನೆ ಕೋಶ ಕಾರ್ಯಕ್ರಮದಲ್ಲಿ ಮಾತನಾಡಿ, ಹಾಸನ ಎಂದರೆ ಹೆಚ್ಚಾಗಿ ಕೃಷಿ ಭೂಮಿ ಇದ್ದು, ನಮ್ಮಪ್ಪನ ಬಳಿ ಜಮೀನು ಇದೆ ಅದೇ ಸಾಕು ಎಂದು ಹೇಳುತ್ತಾರೆ. ಆದರೆ ಅದು ನಿಮ್ಮಪ್ಪ ಮಾಡಿರುವಂತದ್ದು. ವಿದ್ಯಾರ್ಥಿಗಳಾಗಿ

ನೀವು ಏನು ಮಾಡಿದ್ದೀರಾ ಎಂಬುದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದರು.

ಯಾವುದೇ ಕೆಲಸಕ್ಕೆ ಹೋಗುವ ಪ್ರಾರಂಭದಲ್ಲಿ ಸಂಬಳಕ್ಕೆ ಯಾರೂ ಹಿಂದೆ ಬೀಳಬೇಡಿ. ಮೊದಲು ನಾವು ಕೆಲಸ ಕಲಿಯಬೇಕು. ಹೆಚ್ಚಿನ ಸಂಬಳಕ್ಕಿಂತ ನಿಮ್ಮ ಕೌಶಲ್ಯ ಮುಖ್ಯ. ಕೆಲಸಕ್ಕಾಗಿ ಯಾವತ್ತೂ ಹಣ ಕೊಟ್ಟು ಕೆಲಸ ಪಡೆಯಬೇಡಿ. ನಿಮಗೆ ಸಾಕಷ್ಟು ಕೆಲಸ ಇದೆ. ದುಡ್ಡು ಕೊಟ್ಟು ಜಾಬ್ ಪಡೆಯುವುದು ಬೇಡ. ಕೆಲಸ ನಿಮ್ಮ ಕಣ್ಣ ಮುಂದೆಯೇ ಇದ್ದು, ಪ್ರಯತ್ನದಿಂದ ಸಿಗಲಿದೆ ಎಂದು ಸಲಹೆ ನೀಡಿದರು.

ಕಾಲೇಜಿನ ಪ್ಲೇಸ್ಮೆಂಟ್ ಅಧಿಕಾರಿ ಡಾ. ಬಿ.ಜಿ. ನಾಗರಾಜು ಮಾತನಾಡಿ, ಶಿಕ್ಷಣದ ಜೊತೆಗೆ ಉದ್ಯೋಗದ ಅರಿವು ಇದ್ದರೆ ಉತ್ತಮ. ನಮ್ಮ ಶಿಕ್ಷಣಕ್ಕೆ ಯಾವ ಕಂಪನಿ ಹೊಂದಾಣಿಕೆ ಆಗುತ್ತದೆ ನಾವು ಯಾವ ರೀತಿ ಸಿದ್ಧರಾಗಬೇಕು. ಈ ಬಗ್ಗೆ ಯಾವ ಗೊಂದಲ ಇರಬಾರದು. ಬೃಹತ್ ಉದ್ಯೋಗ ಮೇಳ ಮಾಡುವ ಉದ್ದೇಶ ಏನೆಂದರೆ ಒಂದು ಸ್ಪರ್ಧೆಗೆ ಸಿದ್ಧರಾಗಬೇಕು. ಉದ್ಯೋಗ ಸಿಗುವ ಕಂಪನಿಗಳ ಪರಿಚಯವಾಗಬೇಕು, ಜೊತೆಗೆ ಆ ಕಂಪನಿ ಜೊತೆಗೆ ಹೇಗೆ ಒಡನಾಟ ಬೆಳೆಸಿಕೊಂಡು ಹೋಗುವುದು, ಸಂದರ್ಶನದಲ್ಲಿ ಹೇಗೆ ಭಾಗವಹಿಸುವುದು, ಅಂತಿಮ ವಿದ್ಯಾರ್ಥಿಗಳಿಗೆ ಮೇಜರ್ ಆದರೂ ಕೂಡ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸಿದ್ಧರಾಗಲು ಅನುಕೂಲವಾಗಲಿದೆ ಎಂದರು.

ವಿದ್ಯಾರ್ಥಿಗಳಿಗೆ ಉಪಯೋಗವಾಗಲಿ ಎಂದು ವಿವಿಧ ಕಂಪನಿ ಕರೆಸಲಾಗಿದೆ. ಶಿಕ್ಷಣ ಪಡೆಯುವಾಗಲೇ ಸ್ಪರ್ಧಾತ್ಮಕ ಜಗತ್ತಿಗೆ ಸ್ಪರ್ಧೆ ಮಾಡಲು ಪರಿಚಯಿಸಬೇಕು ಎಂಬುದು ಪ್ಲೇಸ್ಮೆಮೆಂಟ್ ಆಫ್ ಎಜುಕೇಶನ್‌ನ ಉದ್ದೇಶವಾಗಿದೆ. ಯಾವುದೇ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರೂ ಇಲ್ಲಿ ನೊಂದಣಿ ಮಾಡಿಕೊಳ್ಳಬಹುದು ಎಂದು ಸಲಹೆ ನೀಡಿದರು.

ಪ್ರಾಂಶುಪಾಲೆ ಡಾ. ಎಸ್. ಮಧುಮತಿ, ಪ್ಲೇಸ್ಮೆಂಟ್ ಅಧಿಕಾರಿ ಡಾ. ಜೆ.ಜಿ. ರಾಜಶೇಖರ್, ಲತಾ ಕುಲಕರ್ಣಿ, ಡಾ. ಸವಿತಾ, ಐ.ಕ್ಯೂ.ಎ.ಸಿ. ಕೋ ಆರ್ಡಿನೇಟರ್ ವಿ. ಸುಶ್ಮಿತಾ ಇತರರಿದ್ದರು.

ಬಿದರಕೆರೆಯಮ್ಮ ಜಾತ್ರೆ ಸಂಪನ್ನ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನ ಹಿರೀಸಾವೆ ಸಮೀಪದ ಬಿದರಕೆರೆ ಗ್ರಾಮ ದೇವತೆ ಶ್ರೀ ಬಿದರಕೆರೆಯಮ್ಮ(ಶ್ರೀ ಹುಚ್ಚಮ್ಮ) ದೇವಿಯ ಹಬ್ಬ ಹಾಗೂ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಶುಕ್ರವಾರ ಮುಂಜಾನೆ ದೇಗುಲಕ್ಕೆ ಹಸಿರು ಚಪ್ಪರ ಹಾಕಿ ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ವಿವಿಧ ಬಗೆಯ ಪುಷ್ಪ ಹಾಗೂ ವಿದ್ಯುತ್ ದೀಪಾಲಂಕಾರ ಮಾಡಿ ಉತ್ಸವ ಬೀದಿಯನ್ನು ರಂಗೋಲಿ ಬಿಡಿಸಿ ಬಗೆ ಬಗೆಯ ಬಣ್ಣಗಳಿಂದ ಅಲಂಕರಿಸಲಾಗಿತ್ತು.

ದೇವಿಯು 12 ಹಳ್ಳಿ ಬುಡಕಟ್ಟಿಗೆ ಸೇರಿದ್ದು ಮುಂಜಾನೆಯಿಂದಲೇ ದೇಗುಲಕ್ಕೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಹಣ್ಣು ಕಾಯಿ ಅರ್ಪಿಸಿ ಗಂಧ-ಕರ್ಪೂರ ಬೆಳಗಿಸಿ ಅಮ್ಮನವರ ದರ್ಶನ ಪಡೆದು ಪುನೀತರಾದರು.

ವಿಘ್ನಸಂತೆ ಗ್ರಾಮದಲ್ಲಿರುವ ಮೆರವಿಗ್ರಹ ದೇಗುಲದಲ್ಲಿ ಅಕ್ಕ-ತಂಗಿಯರಾದ ಶ್ರೀ ಬಿದರಕೆರೆಯಮ್ಮ ಹಾಗೂ ಶ್ರೀ ಗದ್ದೆಕೆಂಪಮ್ಮ ದೇವಿಯ ಉತ್ಸವ ಮೂರ್ತಿಯನ್ನು ವಿವಿಧ ಬಗೆಯ ಒಡವೆ ಹಾಗೂ ವಸ್ತ್ರಗಳಿಂದ ಸಿಂಗರಿಸಲಾಯಿತು.

ಸಂಜೆ ಸುಮಾರಿನಲ್ಲಿ ವಿಘ್ನಸಂತೆ ಗ್ರಾಮದಿಂದ ದೇವಿಯರ ಉತ್ಸವ ಮಂಗಳವಾದ್ಯದೊಂದಿಗೆ ಪ್ರಾರಂಭಗೊಂಡು ಪಾಳ್ಯ ಮೂಲಕ ಬಿದರಕೆರೆ ದೇಗುಲದ ಬಳಿಗೆ ಆಗಮಿಸಿತು.

ಉತ್ಸವದಲ್ಲಿ ಕೆಂಚರಾಯ ಹಾಗೂ ಭೂತರಾಯ ಸೋಮುಗಳ ಕುಣಿತ ನೋಡುಗರ ಗಮನ ಸೆಳೆಯಿತು.

ಉತ್ಸವದಲ್ಲಿ ಹೆಣ್ಣು ಮಕ್ಕಳು ತಂಬಿಟ್ಟಿನ ಆರತಿ ಹಿಡಿದು ಸಾಗಿದರೆ ಹಿರಿಯ ತಾಯಂದಿರು ದೇವಿ ಮೇಲಿನ ಸೋಬಾನೆ ಪದ ಹಾಡಿದರು.

ನೂರಾರು ಹೆಣ್ಣುಮಕ್ಕಳು ಬಾಯಿಬೀಗ ಚುಚ್ಚಿಸಿಕೊಂಡು ಉತ್ಸವದಲ್ಲಿ ಪಾಲ್ಗೊಂಡು ಹರಕೆ ತೀರಿಸಿದರು.

ರಾತ್ರಿ 11 ಗಂಟೆ ಸುಮಾರಿಗೆ ದೇವಿಯರ ಉತ್ಸವ ದೇಗುಲದ ಬಳಿಗೆ ಆಗಮಿಸುತ್ತಿದ್ದಂತೆಯೇ ಮದ್ದು ಗುಂಡಿನ ಸೇವೆ ನಡೆಯಿತು.

ದೇಗುಲದ ಎದುರು ಧರ್ಮಧ್ವಜ ಸ್ಥಾಪನೆ ಹಾಗೂ ರಥದ ಮೇಲೆ ಕಲಶ ಪ್ರತಿಷ್ಠಾಪನೆ ನೆರವೇರಿತು. ಬಳಿಕ ಹಸಿರು ಬಂಡಿ ಉತ್ಸವ ಪ್ರಾರಂಭಗೊಂಡು ದೇಗುಲದ ಸುತ್ತು ಪ್ರದಕ್ಷಣೆ ನಡೆಯಿತು.

ರಾತ್ರಿ ಭಲಧೋಳ್ ಧುರ್ಯೋಧನ ಹಾಗೂ ಶ್ರೀ ಕೃಷ್ಣ ಸಂಧಾನ ಎಂಬ ಪೌರಾಣಿಕ ನಾಟಕ ಪ್ರದರ್ಶನ ನಡೆಯಿತು. ಭಾನುವಾರ ಬೆಳಿಗ್ಗೆ 8 ಗಂಟೆ ಸುಮಾರಿಗೆ ಶ್ರೀ ಅಮ್ಮನವರ ರಥೋತ್ಸವ ಜರುಗಲಿದ್ದು ಬಳಿಕ ದೇವಿಯರ ಮಡಿಲಕ್ಕಿ ಉತ್ಸವ ನಡೆಯಲಿದೆ.

ಗುಂಗರಮಳೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಶಿವಕುಮಾರ್, ಜೆಡಿಎಸ್ ಮುಖಂಡರಾದ ನೊಣವಿನಕೆರೆ ರಾಕೇಶ್ ಗೌಡ, ವಿಘ್ನಸಂತೆ ವೇಣು, ದೇಗುಲದ ಸಮಿತಿ ಅಧ್ಯಕ್ಷ ರಾಜೇಗೌಡ, ಗುಡಿಗೌಡ ಸಾಗರ್, ಖಜಾಂಚಿ ಶೇಖರ್ ಹಾಗೂ ಇತರರಿದ್ದರು.

ರೈತರಿಗೆ ಭೂಮಿ ನೀಡದಿದ್ದರೆ ಹೋರಾಟ

ಹಾಸನ: ಕೈಗಾರಿಕಾ ಅಭಿವೃದ್ಧಿಗಾಗಿ ಗವೇನಹಳ್ಳಿ, ದೊಡ್ಡ ಹೊನ್ನೇನಹಳ್ಳಿ, ಕಸ್ತೂರವಳ್ಳಿ, ಬುಸ್ತೇನಹಳ್ಳಿ ಸೇರಿದಂತೆ 7 ಗ್ರಾಮಗಳ 1057 ಎಕರೆ ಜಮೀನನ್ನು 2007ರಲ್ಲೇ ಸ್ವಾಧೀನ ಮಾಡಿದ್ದರೂ ಈವರೆಗೂ ಸೂಕ್ತ ಪರಿಹಾರ ನೀಡಿಲ್ಲ ಎಂದು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ದೇವರಾಜೇಗೌಡ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಹಲವು ವರ್ಷಗಳಿಂದ ಪರಿಹಾರಕ್ಕಾಗಿ ಕಾದ ರೈತರು, ಕರ್ನಾಟಕ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಹಾಕಿದರು. ರೈತರ ಮನವಿ ಆಲಿಸಿದ ನ್ಯಾಯಾಲಯ, ಭೂ ಸ್ವಾಧೀನಪಡಿಸಿಕೊಂಡ ಸ್ವತ್ತನ್ನು ಅಭಿವೃದ್ಧಿಪಡಿಸಿ ಪ್ರತಿ ಎಕರೆಗೆ 10,781 ಅಡಿಯಂತೆ ನಿವೇಶನವನ್ನು ರೈತರಿಗೆ ನೀಡುವಂತೆ ಸೂಚಿಸಿ ತೀರ್ಪು ನೀಡಿತು.

ವಿಪರ್ಯಾಸ ಎಂದರೆ ಹೈಕೋರ್ಟ್ ಆದೇಶ ಮಾಡಿದರೂ ಈವರೆಗೂ ಸ್ವಾಧೀನ ಪಡಿಸಿಕೊಂಡಿರುವ ಭೂಮಿಯನ್ನು ಅಭಿವೃದ್ಧಿ ಮಾಡಿಲ್ಲ, ರೈತರಿಗೆ ನಿವೇಶನ ವಿತರಣೆ ಮಾಡಿಲ್ಲ ಎಂದು ದೂರಿದರು.

ಕೆಐಎಡಿಬಿ ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿ ಖಂಡಿಸಿ ಮತ್ತೊಮ್ಮೆ ಉಚ್ಚ ನ್ಯಾಯಾಲಯದ ಮುಂದೆ ರಿಟ್ ಪೆಟಿಷನ್ ಹಾಕಿದೆವು. ಈ ಸಂಬಂಧ ಕಳೆದ ಮಾರ್ಚ್ 7 ರಂದು ತೀರ್ಪು ನೀಡಿದ ನ್ಯಾಯಾಲಯ, ಮುಂದಿನ 90 ದಿನಗಳ ಒಳಗೆ ಕಾಮಗಾರಿಯನ್ನು ಮುಗಿಸುವಂತೆ ನಿರ್ದೇಶನ ನೀಡಿದೆ. ಇಷ್ಟಾದರೂ ಕೂಡ ಇನ್ನೂ ಆಸ್ತಿ ಅಭಿವೃದ್ಧಿಪಡಿಸಲು ಯಾರೊಬ್ಬರೂ ಮುಂದಾಗಿಲ್ಲ. ಇದರ ಹಿಂದೆ ಯಾರಿದ್ದಾರೋ ಗೊತ್ತಿಲ್ಲ. ಮುಂದಿನ 7 ದಿನಗಳಲ್ಲಿ ಕಾಮಗಾರಿ ಆರಂಭಿಸದೇ ಇದ್ದರೆ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ರೈತರಾದ ತಾರಾನಾಥ್, ಹರೀಶ್, ಸುಬ್ಬೇಗೌಡ, ಸ್ವಾಮಿ, ಜಯರಾಂ, ನಾಗೇಶ್ ಇದ್ದರು.

ನೀರು ವಿತರಣಾ ನಿರ್ವಾಹಕರ ಕೌಶಲ ತರಬೇತಿ ಮುಕ್ತಾಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ಪಟ್ಟಣದ ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಜಲ್ ಜೀವನ್ ಮಿಷನ್ ಅಡಿ ತಾಲ್ಲೂಕಿನ ವಿವಿಧ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ವ ಸಹಾಯ ಸಂಘದ ಮಹಿಳೆಯರಿಗೆ ಕಳೆದ 17 ದಿನಗಳಿಂದ ಹಮ್ಮಿಕೊಳ್ಳಲಾಗಿದ್ದ ನೀರು ವಿತರಣಾ ನಿರ್ವಾಹಕರ ಬಹು ಕೌಶಲ್ಯ ತರಬೇತಿಯು ಶುಕ್ರವಾರ ಯಶಸ್ವಿಯಾಗಿ ಮುಕ್ತಾಯಗೊಂಡಿತು.

ತರಬೇತಿಯಲ್ಲಿ ತಾಲ್ಲೂಕಿನ ಎಲ್ಲಾ ಗ್ರಾಪಂಗಳ ವ್ಯಾಪ್ತಿಯಿಂದ 50ಕ್ಕೂ ಹೆಚ್ಚು ಮಂದಿ ಮಹಿಳೆಯರು ನಿತ್ಯವೂ ಭಾಗವಹಿಸಿ ಪ್ರಯೋಜನ ಪಡೆದರು. ಸರ್ಕಾರಿ ಕೈಗಾರಿಕಾ ತರಬೇತಿ ಕೇಂದ್ರದ ಅಧಿಕಾರಿ ಯೋಗನಾಥ್ ಅವರು ತರಬೇತಿ

ನೀಡಿದರು.

ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಹಾಸನ ಜಿಲ್ಲಾ ಪಂಚಾಯಿತಿ ಯೋಜನಾ ನಿರ್ದೇಶಕ ಚಂದ್ರಮೌಳಿ ಅವರು, ಸರ್ಕಾರವು ಈ ತರಬೇತಿಗೆ ಪ್ರತಿ ಗ್ರಾಮ ಪಂಚಾಯಿತಿಯಿಂದ ಒಬ್ಬರಿಗೆ 49 ಸಾವಿರ ರೂ. ವೆಚ್ಚ ಮಾಡುತ್ತಿದ್ದು, ಮುಂದಿನ ದಿನಗಳಲ್ಲಿ ತರಬೇತಿ ಪಡೆದ ಎಲ್ಲರಿಗೂ ನೀರು ವಿತರಣಾ ನಿರ್ವಾಹಕರ ಜವಾಬ್ದಾರಿಯನ್ನು ಹೊಂದಲಿದ್ದೀರಿ. ನೀವು ಪಡೆದ ತರಬೇತಿಯು ಮುಂದಿನ ದಿನಗಳಲ್ಲಿ ಜವಾಬ್ದಾರಿಯುತ ಕೆಲಸ ನಿರ್ವಹಿಸಲು ಸಹಕಾರಿಯಾಗಲಿದೆ ಎಂದರು.

ಜಿಲ್ಲಾ ಪಂಚಾಯಿತಿ ಸಹಾಯಕ ಯೋಜನಾಧಿಕಾರಿ ಸುನಿತ ಮಾತನಾಡಿ, ತರಬೇತಿ ಪಡೆದ ಎಲ್ಲರೂ ನಿಮಗೆ ನೀಡುವ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಿ ಎಂದು ತಿಳಿಸುತ್ತಾ ಮುಂದೆಯೂ ಕೂಡ ನಿಮಗೆ 21 ದಿನಗಳ ಕಾಲ ಕೆಲಸ ನಿರ್ವಹಣೆಯ ತರಬೇತಿಯನ್ನು ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಇಂಜಿನಿಯರ್‌ಗಳ ಉಸ್ತುವಾರಿಯಲ್ಲಿ ಮುಗಿಸಬೇಕಿದೆ. ಇದಾದ ಬಳಿಕ ಮುಂದಿನ ದಿನಗಳಲ್ಲಿ ನಿಮಗೆ ಒಳ್ಳೆಯ ಅವಕಾಶಗಳನ್ನು ನೀಡುವ ಸಾಧ್ಯತೆ ಇರುವುದರಿಂದ ತರಬೇತಿಯಲ್ಲಿ ಕಲಿ